**B**

**SL. No. : ZZ**

ಒಟ್ಟು ಪ್ರಶ್ನೆಗಳ ಸಂಖ್ಯೆ : 46 ]

Total No. of Questions : 46 ]

**ಸಂಕೇತ ಸಂಖ್ಯೆ : 62-K**

**CCE RR**
**UN-REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 04. 04. 2019 ] [ Date : 04. 04. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ ] [ Time : 9-30 A.M. to 12-00 Noon

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 46 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 10 × 1 = 10

1. ಕವಿ ಜಿ.ಪಿ. ರಾಜರತ್ನಂ ಅವರು ಗುರುತಿಸಿರುವಂತೆ ಕನ್ನಡಿಗರ ಒಂದು ಒಳ್ಳೆಯ ಗುಣವನ್ನು ತಿಳಿಸಿರಿ.
2. ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿ ಅವರು ಯಾವ ತೀರ್ಮಾನ ತೆಗೆದುಕೊಂಡರು ?
3. ಕಿತ್ತೂರಿನ ಚೆನ್ನಮ್ಮ ಯಾರ ವಿರುದ್ಧ ಹೋರಾಡಿದಳು ?
4. ರಾಣಿ ಚೆನ್ನಮ್ಮ ತನ್ನ ವೀರರನ್ನು ಏನೆಂದು ಹುರಿದುಂಬಿಸಿದಳು ?
5. ನಾ. ಕಸ್ತೂರಿ ಅವರದು ಯಾವ ಯಾವ ಕ್ಷೇತ್ರಗಳಲ್ಲಿ ಮರೆಯಲಾರದ ಹೆಸರು ?
6. ಕೋಗಿಲೆಯ ಕಂಠ ಹೇಗಿದೆ ?
7. 'ನಾವು ಯಾವ ಪಣವನ್ನು ತೊಡಬೇಕಿದೆ' ಎಂದು ಕವಿ ನಿಸಾರ್ ಅಹಮದ್ ಅವರು ಹೇಳುತ್ತಾರೆ ?
8. ಕವಿಯ ಆಶಯದಂತೆ 'ಸರ್ವಶಕ್ತಿದೂತ' ಅವತರಿಸುವುದು ಯಾವಾಗ ?
9. ದೊರೆಯಾದವನ ಗುಣ ಯಾವುದಿರಬೇಕೆಂದು ಸೋಮೇಶ್ವರ ಶತಕ ಹೇಳುತ್ತದೆ ?
10. ತನ್ನ ಮಗನನ್ನು ಕುರಿತು 'ವಿಶು'ವಿನ ಅಂತರಂಗದಲ್ಲಿ ಮೊಳಗುತ್ತಿದ್ದುದೇನು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 10 × 2 = 20

11. ಅಷ್ಟಾದಶಾಕ್ಷರೀ ಮಂತ್ರವನ್ನು ಬಿಡಿಸಿ ಬರೆಯಿರಿ.
12. ಐ.ಪಿ.ಎಲ್. ಕ್ರೀಡಾ ಸ್ಪರ್ಧೆಯಲ್ಲಿ ಅನಿಲ್ ಕುಂಬ್ಳೆ ಅವರ ಪಾತ್ರವೇನು ?
13. 'ಆಟ' ಮತ್ತು 'ತಂಡ'ದ ಬಗ್ಗೆ ಅನಿಲ್ ಕುಂಬ್ಳೆ ಅವರಿಗಿರುವ ಬದ್ಧತೆಯು ನಿಮ್ಮ ವ್ಯಕ್ತಿತ್ವದ ಮೇಲೆ ಬೀರಿದ ಪರಿಣಾಮವನ್ನು ತಿಳಿಸಿರಿ.
14. ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಮಸಿಂಗನ ಕುಟುಂಬದ ಕೊಡುಗೆ ಏನೆಂಬುದನ್ನು ಬರೆಯಿರಿ.
15. ರಾಮಸಿಂಗನು ಹಿಡಿದ 'ಧ್ವಜ' ಸಿಡಿಯುವ ಪಿಸ್ತೂಲಿಗಿಂತ ಶ್ರೇಷ್ಠ ಹೇಗೆ ? ತಿಳಿಸಿರಿ.
16. ಮನುಷ್ಯನಲ್ಲಿರುವ 'ಚಿಂತೆ'ಯನ್ನು ಕುರಿತು ಅಂಬಿಗರ ಚೌಡಯ್ಯ ಹೇಳಿರುವುದೇನು ?
17. ಅಂಬಿಗರ ಚೌಡಯ್ಯ ಅವರು ನಿರೂಪಿಸಿರುವಂತೆ, 'ನಿಜ ಶರಣನಾಗುವುದು' ಹೇಗೆ ? ತಿಳಿಸಿರಿ.
18. ರೈತನು ಮಳೆರಾಯನಲ್ಲಿ ಏನೆಂದು ಪ್ರಾರ್ಥಿಸಿಕೊಳ್ಳುತ್ತಾನೆ ?
19. ಸ್ವಾತಿ ಮಳೆ ಬೀಳುವುದರಿಂದ ರೈತನಿಗಾಗುವ ಪ್ರಯೋಜನವೇನು ?
20. ಈರಪ್ಪ ಎಂ. ಕಂಬಳಿಯವರು ಕಂಡಂತೆ ಬಿಸಿಲು ಸೀಮೆಯ ಜನರ ಸ್ವಭಾವ ಎಂತಹುದು ?

**ಈ ಕೆಳಗಿನ ಹೇಳಿಕೆಗಳ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ :** 2 × 3 = 6

21. "ಕರ್ನಾಟಕ ವಂಗ, ಆಂಧ್ರ, ಭಾರತೀಯರೊಂದೆ"

22. "ತಾಯಿ, ಎಂದು ಕರೆದ ಕನ್ನಡದ ಕಂದ ಯಾರು ?"

23. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಅಕ್ಷರವೆಂಬುದು ..................................................

.....................................................................

.....................................................................

.................................................... ಹೊಸರೂಪ.

***ಅಥವಾ***

ದೀಪ .............................................................

.....................................................................

.....................................................................

............................................................ ಸಮಸ್ತ.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

24. ಚೆನ್ನವೀರ ಕಣವಿ

25. ಅ.ರಾ. ಮಿತ್ರ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

26. 'ಪೊಲೀಸಿನವರಲ್ಲೂ ಮಾನವೀಯತೆ ಇದೆ' ಎಂಬ ಮಾತು ಲಾಕಪ್ಪಿನಲ್ಲಿ ಒಂದು ರಾತ್ರಿ ಪಾಠದಲ್ಲಿ ಹೇಗೆ ನಿರೂಪಿಸಲ್ಪಟ್ಟಿದೆ ?

***ಅಥವಾ***

ಮಿನಿಪೊಲೀಸ್ ನಗರದ 'ಲಾಕಪ್ಪಿನಲ್ಲಿ' ಒಂದು ರಾತ್ರಿ ಕಳೆದ ಗೊರೂರು ರಾಮಸ್ವಾಮಿ ಅವರ ಅನುಭವದಿಂದ ನಿಮ್ಮಲ್ಲಿ ಮೂಡಿದ ತಿಳುವಳಿಕೆಯನ್ನು ಬರೆಯಿರಿ.

27. ಮನಸ್ಸಿನ ಶುದ್ಧತೆಯನ್ನು ಕಾಪಾಡಿಕೊಳ್ಳುವುದು ಹೇಗೆಂದು ಪುರಂದರದಾಸರು ಹೇಳಿದ್ದಾರೆ ?

***ಅಥವಾ***

ವ್ಯಕ್ತಿಯೊಬ್ಬ ತನ್ನ ಮನಸ್ಸನ್ನು ಶೋಧಿಸಿಕೊಳ್ಳಲು 'ಶ್ರೀ ಪುರಂದರ ವಿಠಲನ' ನಾಮಸ್ಮರಣೆಯನ್ನು ಮಾಡುತ್ತಲೇ ಇರಬೇಕು ಹೇಗೆ ? ವಿವರಿಸಿರಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

28. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ

(ಎ) ಎರಡು (ಬಿ) ಐದು

(ಸಿ) ಹದಿಮೂರು (ಡಿ) ಇಪ್ಪತ್ತನಾಲ್ಕು

29. ಮಕ್ಕಳು '<u>ವಿನೋದ</u>'ದಿಂದ ಮೈದಾನದಲ್ಲಿ ಆಡುತ್ತಿದ್ದಾರೆ. ಈ ವಾಕ್ಯದಲ್ಲಿ ಅಡಿಗೆರೆ ಎಳೆದಿರುವ ಪದದ ತದ್ಭವ ರೂಪ

(ಎ) ಬಿನದ (ಬಿ) ವಿನುತ

(ಸಿ) ಆನಂದ (ಡಿ) ಬಿನೋದ

30. ಹಣ್ಣುಗಳು ಮರದಿಂದ ನಿರಂತರವಾಗಿ ಬೀಳುತ್ತಲೇ ಇದ್ದವು. ಈ ವಾಕ್ಯದಲ್ಲಿನ ತೃತೀಯ ವಿಭಕ್ತಿ ಹೊಂದಿರುವ ಪದವಿದು

(ಎ) ಹಣ್ಣುಗಳು (ಬಿ) ಬೀಳುತ್ತ

(ಸಿ) ಮರದಿಂದ (ಡಿ) ನಿರಂತರವಾಗಿ

31. 'ಬೆಟ್ಟದಾವರೆ' — ಪದವು ಈ ಸಂಧಿಗೆ ಉದಾಹರಣೆಯಾಗಿದೆ.

(ಎ) ಲೋಪ ಸಂಧಿ (ಬಿ) ಆಗಮ ಸಂಧಿ

(ಸಿ) ಸವರ್ಣದೀರ್ಘ ಸಂಧಿ (ಡಿ) ಆದೇಶ ಸಂಧಿ

32. 'ಹನುಮನಂತೆ ನೀ ವಿಕಾಸಗೊಳ್ಳುವೆ' — ಈ ವಾಕ್ಯದಲ್ಲಿರುವ ಅಲಂಕಾರ

(ಎ) ರೂಪಕಾಲಂಕಾರ (ಬಿ) ಉಪಮಾಲಂಕಾರ

(ಸಿ) ಶ್ಲೇಷಾಲಂಕಾರ (ಡಿ) ಉತ್ಪ್ರೇಕ್ಷಾಲಂಕಾರ

33. 'ಉಂಬುವ' ಈ ಪದದ ಅರ್ಥವಿದು

(ಎ) ಭೋಜನ (ಬಿ) ಊಟಕ್ಕೆ ಕೂರುವ

(ಸಿ) ಉಣ್ಣುವ (ಡಿ) ತೇಗುವ

34. "ನಿಮ್ಮ ಧಮನಿ–ಧಮನಿಗಳಲ್ಲಿ ರಕ್ತದ ಕಣಗಳಿರುವವರೆಗೂ ವೀರರಾಗಿ ಹೋರಾಡಿ." ಈ ವಾಕ್ಯದಲ್ಲಿರುವ ದ್ವಿರುಕ್ತಿ ಪದವಿದು

(ಎ) ಧಮನಿ–ಧಮನಿ (ಬಿ) ರಕ್ತದ ಕಣ

(ಸಿ) ವೀರರಾಗಿ (ಡಿ) ಹೋರಾಡಿ

35. ಒಳ್ಳೆಯವರಿಗೆ ಕಾಲ ಈಗಲೂ ಚೆನ್ನಾಗಿಯೇ ಇದೆ. ಈ ವಾಕ್ಯದಲ್ಲಿರುವ ಒಳ್ಳೆಯ ಎಂಬ ಪದದ ನಾಮವಾಚಕ

(ಎ) ಸಂಖ್ಯಾವಾಚಕ (ಬಿ) ವಸ್ತುವಾಚಕ

(ಸಿ) ಗುಣವಾಚಕ (ಡಿ) ಸಂಖ್ಯೇಯ ವಾಚಕ

36. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯದ ವಿಧಾನವನ್ನು ಹೀಗೆನ್ನುತ್ತೇವೆ

(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ

(ಸಿ) ಸರಳ ವಾಕ್ಯ (ಡಿ) ಮಿಶ್ರ ವಾಕ್ಯ

37. ಪೂರ್ಣ ಅರ್ಥ ಕೊಡುವ ವಾಕ್ಯದ ಕೊನೆಯಲ್ಲಿ ಬಳಸುವ ಚಿಹ್ನೆ ಇದು

(ಎ) ಅರ್ಧವಿರಾಮ (ಬಿ) ಪೂರ್ಣವಿರಾಮ

(ಸಿ) ವಾಕ್ಯವೇಷ್ಟನ (ಡಿ) ವಿವರಣಾತ್ಮಕ

38. 'ಹೋಗುತ್ತಾರೆ' ಈ ಪದದಲ್ಲಿರುವ 'ಧಾತು'ರೂಪವಿದು

(ಎ) ಹೊಗು (ಬಿ) ಹೋದ

(ಸಿ) ಹೋಗು (ಡಿ) ಹೋಗುವ

39. 'ಹೆಮ್ಮರ' ಈ ಪದವನ್ನು ವಿಗ್ರಹವಾಕ್ಯ ಮಾಡಿ ಬರೆದಾಗ ಆಗುವ ರೂಪ

(ಎ) ಹಿರುದು + ಮರ (ಬಿ) ಹಿರಿ + ಮರ

(ಸಿ) ಹೆಚ್ಚು + ಮರ (ಡಿ) ಹೀಗೆ + ಮರ

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 4 × 1 = 4

ಕನ್ನಡನಾಡಿನಲ್ಲಿ ಅನೇಕ ಅರಸು ಮನೆತನಗಳು ರಾಜ್ಯವಾಳಿ ನಾಡಿನ ಘನತೆಯನ್ನು ಗಗನದೆತ್ತರಕ್ಕೆ ಒಯ್ದು ಮುಟ್ಟಿಸಿವೆ. ಅಂತಹ ಅರಸು ಮನೆತನಗಳಲಿ ವಿಜಯನಗರದ ಅರಸು ಮನೆತನವೂ ಒಂದು. ವಿಜಯನಗರದ ಅರಸರ ಕುಲದೇವತೆ ಭುವನೇಶ್ವರಿ. ಭುವನೇಶ್ವರಿಯೇ ಕನ್ನಡ ರಾಜ್ಯ ರಾಜೇಶ್ವರಿ, ಕನ್ನಡ ನಾಡದೇವಿ. ಈ ನಾಡದೇವಿಯನ್ನು ಪೂಜಿಸುವ ಹಬ್ಬವೇ ನಾಡಹಬ್ಬ. ಇದು ಸಕಲ ಕನ್ನಡಿಗರೂ ವಿಜೃಂಭಣೆಯಿಂದ ಆಚರಿಸುವ ಹಬ್ಬ.

ವಿಜಯನಗರದ ಅರಸರಂತೂ ಈ ಹಬ್ಬವನ್ನು ಎಲ್ಲಿಲ್ಲದ ಸಂಭ್ರಮ ಸಡಗರದಿಂದಲೇ ಆಚರಿಸುತ್ತಿದ್ದರು. ತಾಯಿ ಭುವನೇಶ್ವರಿಯನ್ನು ಸರ್ವ ಅಲಂಕಾರಗಳಿಂದ ಶೃಂಗರಿಸಿ ಒಂಭತ್ತು ದಿನಗಳವರೆಗೂ ಭಕ್ತಿಯಿಂದ ಆಚರಿಸುತ್ತಿದ್ದರು. ಸತತ ಒಂಭತ್ತು ದಿನಗಳು ನಡೆಯುವ ನಾಡದೇವಿಯ ಈ ಪೂಜ್ಯೋತ್ಸವಕ್ಕೆ ನವರಾತ್ರಿ ಎಂದು ಕರೆಯುತ್ತಿದ್ದರು. ಈ ಸಂದರ್ಭದಲ್ಲಿ ಪ್ರತಿದಿನವೂ ಪುರಾಣ, ಪ್ರವಚನ, ಊಟ, ಬಡಬಗ್ಗರಿಗೆ ದಕ್ಷಿಣೆ ನೀಡುವ ಕಾರ್ಯಗಳು ನಡೆಯುತ್ತಿದ್ದವು.

*ಪ್ರಶ್ನೆಗಳು :*

40. ಕನ್ನಡನಾಡ ದೇವಿಯ ಹೆಸರೇನು ?

41. ನಾಡಹಬ್ಬವನ್ನು ಎಷ್ಟು ದಿನಗಳವರೆಗೆ ಆಚರಿಸಲಾಗುತ್ತಿತ್ತು ?

42. ನಾಡಹಬ್ಬ ಎಂದು ಹೆಸರು ಬರಲು ಕಾರಣವೇನು ?

43. ನಾಡಹಬ್ಬದ ಆಚರಣೆಯಲ್ಲಿ ಕೇಳಿ ಬರುವ ಪ್ರಮುಖ ಅರಸು ಮನೆತನ ಯಾವುದು ?

44. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

- ∗ ಶಕ್ತಿಗಿಂತ ಯುಕ್ತಿ ಮೇಲು
- ∗ ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ
- ∗ ಪಾಲಿಗೆ ಬಂದದ್ದೇ ಪಂಚಾಮೃತ

45. ನಿಮ್ಮನ್ನು ಚಿಕ್ಕನಾಯಕನಹಳ್ಳಿಯ ಜನತಾ ಪ್ರೌಢಶಾಲೆಯಲ್ಲಿ ಓದುತ್ತಿರುವ 'ತುಷಾರ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸುತ್ತಿರುವ ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ, ಮೈಸೂರಿನ 'ಒಂಟಿಕೊಪ್ಪಲು' ಬಡಾವಣೆಯ ನಿವಾಸಿಯಾದ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ. $1 \times 4 = 4$

*ಅಥವಾ*

ನಿಮ್ಮನ್ನು ತುಮಕೂರು ನಗರದ ಜಯನಗರ ಬಡಾವಣೆಯ ನಿವಾಸಿ 'ರಘುವೀರ' ಎಂದು ಭಾವಿಸಿಕೊಂಡು, ಬಡಾವಣೆಯಲ್ಲಿ ಸುಂದರ ಉದ್ಯಾನವನವನ್ನು ನಿರ್ಮಿಸಿಕೊಡುವಂತೆ ಕೋರಿ, ಮಹಾನಗರಪಾಲಿಕೆಯ 'ಮೇಯರ್' ಅವರಿಗೊಂದು ಮನವಿ ಪತ್ರವನ್ನು ಬರೆಯಿರಿ.

46. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

- ರಾಷ್ಟ್ರೀಯ ಭಾವೈಕ್ಯತೆಯ ಮಹತ್ವ
- ಯೋಗ ಶಿಕ್ಷಣದ ಅಗತ್ಯ
- ನನ್ನ ನೆಚ್ಚಿನ ಗುರು